ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821-2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

Company Identity Number (CIN):U40109KA2004SGC035177

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2023-24/CYS- 96 ದಿನಾಂಕ: 11 OCT 2023

## ಜನ ಸಂಪರ್ಕ ಸಭೆಯ ನಡಾವಳ

ದಿನಾಂಕ:30.09.2023 ರಂದು ಗೋಣಿಕೊಪ್ಪಲು ಉಪ-ವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ನೇತೃತ್ವದಲ್ಲಿ ನಡೆದ **ಜನ ಸಂಪರ್ಕ** ಸಭೆಯಲ್ಲಿ ಗ್ರಾಹಕರು ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ನಿವೇದಿಸಿಕೊಂಡ ದೂರುಗಳು ಮತ್ತು ಅವುಗಳ ಇತ್ಯರ್ಥಕ್ಕೆ ಕೈಗೊಂಡ ಕ್ರಮಗಳ ವಿವರಗಳು ಕೆಳಕಂಡಂತಿವೆ.

**ಸಭೆಯಲ್ಲಿ ಹಾಜರಿದ್ದವರು:-**

1. ಶ್ರೀ ಸೋಮಶೇಕರ್.ಎಂ.ಕೆ : ಅಧೀಕ್ಷಕ ಇಂಜಿನಿಯರ್(ವಿ), ಚಾ-ಕೊಡಗು ವೃತ್ತ, ಮೈಸೂರು.
2. ಶ್ರೀಮತಿ ಅನಿತಾ ಬಾಯ್, : ಕಾ.ನಿ.ಇಂ(ಕ), ಕಾರ್ಯ ಮತ್ತು ಪಾಲನಾ ವಿಭಾಗ ಮಡಿಕೇರಿ.
3. ಶ್ರೀ ಡಿ. ಎನ್. ನೀಲ ಶೆಟ್ಟಿ, : ಸ.ಕಾ.ನಿ.ಇಂ(ಕ), ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಗೋಣಿಕೊಪ್ಪಲು.
4. ಶ್ರೀ ಕೆ. ಆರ್. ಸುನಿ, : ಹಿರಿಯ ಸಹಾಯಕ, ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಗೋಣಿಕೊಪ್ಪಲು.
5. ನಧಾಫ್, : ಸಹಾಯಕ ಇಂಜಿನಿಯರ್ (ತಾಂತ್ರಿಕ), ಗೋಣಿಕೊಪ್ಪಲು ಉಪ-ವಿಭಾಗ.
6. ಶ್ರೀ ಹೇಮಂತ್ ಕುಮಾರ್ ಬಿ.ಪಿ, : ಶಾಖಾಧಿಕಾರಿ, ಗೋಣಿಕೊಪ್ಪಲು ಶಾಖೆ.
7. ಶ್ರೀ ನಾಗೇಂದ್ರ ಪ್ರಸಾದ್, : ಶಾಖಾಧಿಕಾರಿ, ಶ್ರೀಮಂಗಲ ಶಾಖೆ.
8. ಶ್ರೀ ಎಮ್. ಆರ್. ರಂಗಸ್ವಾಮಿ, : ಶಾಖಾಧಿಕಾರಿ, ಬಾಳೆಲೆ ಶಾಖೆ.

| ಕ್ರ. ಸಂ. | ಗ್ರಾಹಕರ ಹೆಸರು ಮತುವಿಳಾಸ | ದೂರಿನ ವಿವರ | ತೆಗೆದುಕೊಂಡ ಕ್ರಮ. |
|---|---|---|---|
| 1. | ಧರ್ಮಜಾ, ಕಳತ್ಮಾಡು ಗ್ರಾಮ, ಮೊ: 9880006444 | * ಇವರು ತಮ್ಮ ದೂರಿನಲ್ಲಿ ಕೆ. ಪಿ. ಸುಬ್ಬಯ್ಯ ನವರ ಗದ್ದೆಗೆ ಹಾದು ಹೋಗುವ ಮಧ್ಯಾಂತರ ಕಂಬ ಹಾಕಬೇಕು.<br>* ಕೆ. ಜಿ. ಧರ್ಮಜಾ ರವರ ಐ.ಪಿ. ಸ್ಥಾವರದ ಕಡತವನ್ನು ಪರಿಶೀಲಿಸುವಂತೆ ಕೋರಿರುತ್ತಾರೆ.<br>* ನೌಕರರನ್ನು ಪದೆ ಪದೆ ವರ್ಗಾಯಿಸದಂತೆ ದೂರು ನೀಡಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯನ್ನು ಆದಷ್ಟು ಬೇಗನೇ ಸರಿಪಡಿಸುವುದಾಗಿ ಸೂಚಿಸಿರುತ್ತಾರೆ. |
| 2. | ಪೂವಯ್ಯ, ಮೊ: 9449760823 | * ಇವರು ತಿಳಿಸಿರುವುದೇನೆಂದರೆ ಕಳತ್ಮಾಡು ಶಾಲೆ ಪಕ್ಕದಲ್ಲಿ ಕಂಬ ಹಾಕಿ ವೈರ್ ಮೇಲೆತ್ತುವಂತೆ ದೂರು ನೀಡಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯನ್ನು ಸ್ಥಳ ಪರಿಶೀಲಿಸಿ ಬಗೆಹರಿಸುವಂತೆ ಗೋಣಿಕೊಪ್ಪಲು ಶಾಖಾಧಿಕಾರಿ ರವರಿಗೆ ಸೂಚಿಸಿರುತ್ತಾರೆ. |
| 3. | ಪುಚ್ಚಿಮಾಡ ದಿನೇಶ್ ಮೊ: 9481844165 | * ಇವರು ತಿಳಿಸಿರುವುದೇನಂಧರೆ ಪೊನ್ನಂಪೇಟೆ ಎಂ.ಯು.ಎಸ್.ಎಸ್. ಸದರಿಯವರು ಜಾಗ ನೀಡಿದ್ದು, ಸದರಿಯವರ 12 ಏಕರೆಯಲ್ಲಿ ಲೈನ್ ಮಾರ್ಗ ಹಾದು ಹೋಗಿದ್ದು, ನನಗೆ ಯಾವುದೇ ಕೃಷಿ ಮಾಡಲು ಆಗುತ್ತಿಲ್ಲ ಎಂದು ದೂರು ನೀಡಿರುತ್ತಾರೆ. ಇದಕ್ಕೆ ಪರಿಹಾರ ಕೊಡುವಂತೆ ಕೋರಿರುತ್ತಾರೆ. | * ಸಭಾಧ್ಯಕ್ಷರು ಸದರಿ ವಿಷಯದ ಬಗ್ಗೆ ಸ್ಥಳ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. |
| 4. | ಎಂ. ಜಿ. ಚಾರ್ಲಿ ಮೊ: 9480021297 | * ಇವರು ತಮ್ಮ ದೂರಿನಲ್ಲಿ ಮನೆಯಲ್ಲಿ 3 ಮೀಟರ್ ಇದ್ದು ಅದುಲ್ಲಿ ಒಂದು ಮೀಟರ್ ಡಿಸ್ ಮಾಡಬೇಕಾಗಿದ್ದು, ಬಳಕೆ ಮಾಡದೇ 12000/ ರೂ ಕಟ್ಟಬೇಕೆಂದು ಸೂಚಿಸುತ್ತಿರುವುದಾಗಿ ದೂರು ನೀಡಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯನ್ನು ಆದಷ್ಟು ಜರೂರಾಗಿ ಬಗೆಹರಿಸುವಂತೆ ಶಾಖಾಧಿಕಾರಿ ರವರಿಗೆ ಸೂಚಿಸಿರುತ್ತಾರೆ. |

| | | | |
|---|---|---|---|
| 5 | ಎ. ಎ. ದೇವಯ್ಯ. ಕೊಟ್ಟಗೇರಿ ಗ್ರಾಮ | * ಇವರು ಬದಿರು ಇದ್ದ ಜಾಗದಲ್ಲಿ 11 ಕೆವಿ. ಮಾರ್ಗವನ್ನು ಸ್ಥಳಾಂತರಿಸಬೇಕು 15 ವರ್ಷದಿಂದ ಹಳೆ ಮಾರ್ಗವಾಗಿದೆ (10 ಕಂಬ) ಮಾರ್ಗ ಬದಲಾವಣೆ 80% ಕರೆಂಟು ಬರುತ್ತಿದ್ದು, ಮಾರ್ಗ ಬದಲಾವಣೆ ಮಾಡಿದ್ದರೆ ಒಳ್ಳೆಯದಾಗುತ್ತದೆ ಎಂದು ದೂರು ನೀಡಿರುತ್ತಾರೆ.<br>* ಇವರು ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸುವ ಕೆಲಸವು ಆದಷ್ಟು ಬೇಗನೆ ಮಾಡಬೇಕೆಂದು ಹಾಗೂ ಯಾವುದೇ ಕಾರಣಕ್ಕೂ ಒಂದು ವರ್ಷದ ವರೆಗೆ ಕಾಯಲು ಸಾಧ್ಯವಿಲ್ಲ ಹಾಗಾಗಿ ಆದಷ್ಟು ಬೇಗ ಮಾಡಿಕೊಡಬೇಕು ಎಂದು ದೂರು ನೀಡಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯನ್ನು ಆದಷ್ಟು ಜರೂರಾಗಿ ಬಗೆಹರಿಸುವಂತೆ ಸೂಚಿಸಿರುತ್ತಾರೆ. |
| 6 | ಎಂ. ಎನ್. ತಮ್ಮಯ್ಯ. ಹೊಸೂರು ಗ್ರಾಮ | * ಇವರು ಹಸು ವಿದ್ಯುತ್ ಅಪಘಾತದಿಂದ ಸತ್ತು ಹೋಗಿದ್ದು, ಸದರಿ ಅಪಘಾತಕ್ಕೆ ಪರಿಹಾರ ಕೋರಿದ್ದು ಅದರ ದಾಖಲಾತಿಗಳು ಏನಾಗಿದೆ ಮತ್ತು ಯಾವ ಹಂತದಲ್ಲಿದೆ ಎಂದು ಕೋರಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯ ಬಗ್ಗೆ ಕ್ರಮ ವಹಿಸುವಂತೆ ಶಾಖಾಧಿಕಾರಿ ರವರಿಗೆ ಸೂಚಿಸಿರುತ್ತಾರೆ. |
| 7 | ತಿಮ್ಮಯ್ಯ. ನಲ್ಲೂರು ಗ್ರಾಮ | * ಇವರು ಕಾಫಿ ಬೆಳೆಗಾರರಿಗೆ ವಿದ್ಯುತ್ ಫ್ರೀ ಮಾಡಬೇಕು<br>* ಹಳೆಯ ವಿದ್ಯುತ್ ಮಾರ್ಗಗಳನ್ನು ಬದಲಾವಣೆ ಮಾಡಿ ಕೊಡಬೇಕು. ಈ ಕಾಮಗಾರಿಯು ಒಂದು ವರ್ಷದೊಳಗೆ ಆಗಬೇಕು.<br>* ಒಂದು ಜಾಗದಲ್ಲಿ 4 ಕುಟುಂಬ ಇದ್ದು. ಆ ಜಾಗದಲ್ಲಿ 1 ಮಾರ್ಗ ಎಳೆಯಬೇಕಿದ್ದು ಆದರೆ 4 ಕುಟುಂಬಗಳಿಗೆ 4 ವಿದ್ಯುತ್ ಮಾರ್ಗಗಳನ್ನು ಎಳೆದುಕೊಂಡು ಹೋಗಿರುತ್ತಾರೆ ಎಂದು ದೂರು ನೀಡಿರುತ್ತಾರೆ.<br>* ಜನವರಿ ಮತ್ತು ಫೆಬ್ರುವರಿ ಮಾಹೆಯಲ್ಲಿ ವಿದ್ಯುತ್ ಕಡಿತಗೊಳಿಸದಂತೆ ದೂರು ನೀಡಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯ ಬಗ್ಗೆ ಕ್ರಮ ವಹಿಸುವಂತೆ ಬಾಳೆಲೆ ಶಾಖಾಧಿಕಾರಿ ರವರಿಗೆ ಸೂಚಿಸಿರುತ್ತಾರೆ. |
| 8 | ಸಿ. ಎಂ. ಬೋಪಯ್ಯ. ನಲ್ಲೂರು ಗ್ರಾಮ. ಮೊ: 8762110678 | * ಇವರು ದೂರಿನಲ್ಲಿ ಮುತ್ತಪ್ಪ ರವರಿಗೆ 20000/- ರೂಗಳು ವಿದ್ಯುತ್ ಬಾಕಿ ಬಿಲ್ಲು ಬಂದಿದ್ದು ಆದರೆ ಸದರಿಯವರು ಹೊಸದಾಗಿ ಮಾಪಕವನ್ನು ಅಳವಡಿಸಿದ್ದು<br><br>(3 ತಿಂಗಳು ಮಾತ್ರ) ಸದರಿ ಮಾಪಕವನ್ನು ಬದಲಾಯಿಸುವಂತೆ ಕೋರಿರುತ್ತಾರೆ.<br>* ಯು.ಎನ್.ಐ.ಪಿ. ಯೋಜನೆಯಲ್ಲಿ ಕಡತವನ್ನು ನೊಂದಾಯಿಸಿದ್ದು, ಆದರೆ ನನಗೆ ಇದುವರೆವಿಗೂ ವಿದ್ಯುತ್ ಸಂಪರ್ಕ ಕಲ್ಪಿಸಿರುವುದಿಲ್ಲ ಎಂದು ದೂರು ನೀಡಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯ ಬಗ್ಗೆ ಕ್ರಮ ವಹಿಸುವಂತೆ ಹಿರಿಯ ಸಹಾಯಕರಿಗೆ ಸೂಚಿಸಿರುತ್ತಾರೆ. |

| | | | |
|---|---|---|---|
| 9 | ಸುಭಾಶ್, ನಲ್ಲೂರು ಗ್ರಾಮ. ಮೊ:7624938100 | * ಇವರು ದೂರಿನಲ್ಲಿ ಕಾಫಿ ಗಿಡಗಳಿಗೆ ನೀರು ಹಾಯಿಸುವ ಸಂದರ್ಭದಲ್ಲಿ ವಿದ್ಯುತ್ ಕಡಿತಗೊಳಸದಂತೆ ಕೋರಿರುತ್ತಾರೆ ಹಾಗೂ ವಿದ್ಯುತ್ ಕಡಿತಗೊಳಸುವುದಾದರೆ ಮೊದಲು ಸೂಚನೆ ನೀಡಿ ವಿದ್ಯುತ್ ಕಡಿತಗೊಳಸುವಂತೆ ಕೋರಿರುತ್ತಾರೆ.<br>* ಸದರಿಯವರು ತಮ್ಮ ಕೃಷಿ ನೀರಾವರಿಗಾಗಿ 20 ಹೆಚ್.ಪಿ. ವಿದ್ಯುತ್ ಭಾರ ಹೊಂದಿದ್ದು ಆದರೆ ಸದರಿಯವರ ವಿದ್ಯುತ್ ಬಿಲ್ಲಿನಲ್ಲಿ 59 ಹೆಚ್. ಪಿ. ಎಂದು ನೊಂದಣಿಯಾಗಿದ್ದು, ಸದರಿ ಸಮಸ್ಯೆಯನ್ನು ಬಗೆಹರಿಸುವಂತೆ ಕೋರಿರುತ್ತಾರೆ.<br>* ಇವರು ಜಂಗಲ್ ಕಟ್ಟಿಂಗ್ ನಿಗಮದಿಂದ ಮಾಡುವುದೋ ಇಲ್ಲವೇ ನಾವೇ ಮಾಡಬೇಕೋ ಎಂದು ಮಾಹಿತಿ ಕೋರಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಿರುತ್ತಾರೆ.<br>* ಅಧೀಕ್ಷಕ ಇಂಜಿನಿಯರ್(ವಿ), ಮೈಸೂರು ರವರ ಮಾತನಾಡಿ ನಿಗಮದ ನೌಕರರೇ ಮಾಡಬೇಕೆಂದು ಮಾಹಿತಿ ನೀಡಿರುತ್ತಾರೆ. |
| 10 | ರುದ್ರಬೀಡು ಗ್ರಾಮ, ಮೊ: | * ಇವರು ದೂರಿನಲ್ಲಿ 63 ಕೆ.ವಿ.ಎ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿರುತ್ತಾರೆ. | * ಸಭಾಧ್ಯಕ್ಷರು ಸದರಿ ಕಾಮಗಾರಿಯು ಮಂಜೂರಾಗಿರುವುದಾಗಿ ಸೂಚಿಸಿ ಸಮಸ್ಯೆಯನ್ನು ಸ್ಥಳದಲ್ಲೆ ಇತ್ಯಾರ್ಥ ಪಡಿಸಿರುತ್ತಾರೆ. |
| 11 | ಸತೀಶ್, ಕಾನೂರು ಗ್ರಾಮ | * ಇವರು ದೂರಿನಲ್ಲಿ ಪೊನ್ನಂಪೇಟೆಯಿಂದ ಕಾನೂರಿಗೆ ಒಂದು ವಿದ್ಯುತ್ ಮಾರ್ಗ ಆಗಿದ್ದು, ಅದನ್ನು ಎಕ್ಸ್ ಪ್ರಸ್ ಲೈನ್ ಎಂದು ಹೇಳ ಬೇರೆ ಮಾರ್ಗಗಳಿಗೆ ಟ್ಯಾಪ್ ಮಾಡುತ್ತಿರುವುದಾಗಿ ಮತ್ತು ಈ ಹೊಸ ಲೈನ್ ನಿರ್ಮಾಣ ಮಾಡುತ್ತಿರುವಾಗ ಕಾರ್ಮಿಕರನ್ನು ಬಿಟ್ಟು ನಾನು ಸಹಾಯ ಮಾಡಿದ್ದೇನೆ ಎಂದು ದೂರು ನೀಡಿರುತ್ತಾರೆ.<br>* ಯಾವಾಗಲು ರಾತ್ರಿ ಕರೆಂಟ್ ಹೋದರೆ ಬೆಳಗ್ಗೆ ಮಕ್ಕಳು ಶಾಲೆಗೆ ಹೋದ ಮೇಲೆ ಕರೆಂಟ್ ಬರುವುದಾಗಿ ದೂರು ನೀಡಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯ ಬಗ್ಗೆ ಕ್ರಮ ವಹಿಸುವಂತೆ ಸೂಚಿಸಿರುತ್ತಾರೆ. |
| 12 | ಎಂ .ಪಿ. ಪೂಣಚ್ಚ, ಬಾಡಗರಕೇರಿ ಗ್ರಾಮ ಮೊ: 7760081967 | * ಇವರು ದೂರಿನಲ್ಲಿ ಮೃತ್ಯುಂಜಯ ದೇವಸ್ಥಾನದ ಹತ್ತಿರ ಎಲ್ಲಾ ವೈರ್ ಹಳೆದಾಗಿದ್ದು ಸರಿಪಡಿಸುವಂತೆ ಕೋರಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯ ಬಗ್ಗೆ ಕ್ರಮ ವಹಿಸುವಂತೆ ಶಾಖಾಧಿಕಾರಿ ರವರಿಗೆ ಸೂಚಿಸಿರುತ್ತಾರೆ. |
| 13 | ಗಣೇಶ್, ನಿಡುಗುಂಬ ಎಸ್ಟೇಟ್ | * ಇವರು ಕಾಫಿ ತೋಟದಲ್ಲಿ 11 ಕೆ. ವಿ. ಮಾರ್ಗವನ್ನು ಬದಲಿಸುವಂತೆ ಕೋರಿರುತ್ತಾರೆ | * ಸಭಾಧ್ಯಕ್ಷರು ಸದರಿ ಸಮಸ್ಯೆಯ ಬಗ್ಗೆ ಕ್ರಮ ವಹಿಸುವಂತೆ ಬಾಳೆಲೆ ಶಾಖಾಧಿಕಾರಿ ರವರಿಗೆ ಸೂಚಿಸಿರುತ್ತಾರೆ. |
| 14 | ಮುತ್ತಪ್ಪ ಎಂ. ಎಂ. ಮೊ: 9448457194 | * ಕೊಳತೋಡು ಗ್ರಾಮಕ್ಕೆ ಲಿಂಕ್ ಲೈನ್ ಮಾಡಲು ಕೋರಿರುತ್ತಾರೆ. | * ಅಂದಾಜು ಪಟ್ಟಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಿರುವುದಾಗಿದೆ.<br>(To No: 2905/30.09.2023) |

| | | | |
|---|---|---|---|
| 15 | ಮುತ್ತಪ್ಪ, ನಲ್ಲೂರು ಗ್ರಾಮ | * ಜಂಗಲ್ ಕಟ್ಟಿಂಗ್ ಮಾಡದಿರುವ ಬಗ್ಗೆ ದೂರು ನೀಡಿರುತ್ತಾರೆ. | * ಸಭಾಧ್ಯಕ್ಷರು ಸದರಿ ಸಮಸ್ಯೆಯ ಬಗ್ಗೆ ಕ್ರಮ ವಹಿಸುವಂತೆ ಬಾಳೆಲೆ ಶಾಖಾಧಿಕಾರಿ ರವರಿಗೆ ಸೂಚಿಸಿರುತ್ತಾರೆ. |
| 16 | ಸಾಯಿ ಶಂಕರ್, ಪೊನ್ನಂಪೇಟೆ. | * ಸದ್ ಗುರು ಸಾಯಿ ಶಂಕರ್ ರವರ ಬಿಲ್ಲನ್ನು ನೀಡಿ ಕಟ್ಟಲು ಒತ್ತಾಯ ಮಾಡುತ್ತಿರುವ ಬಗ್ಗೆ. | * ಸಭಾಧ್ಯಕ್ಷರು ಗ್ರಾಹಕರ ಕೋರಿಕೆ ಮೇರೆಗೆ ಸೋಮವಾರದ ನಂತರ ಈ ಬಿಲ್ಲಿನ ಬಗ್ಗೆ ಚರ್ಚಿಸಿ ಬಗೆಹರಿಸುವಂತೆ ಸೂಚಿಸಿರುತ್ತಾರೆ. |

11/10

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ ಮಡಿಕೇರಿ ರವರಿಗೆ ಮಾಹಿತಿಗಾಗಿ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ಗೋಣಿಕೊಪ್ಪ ಉಪವಿಭಾಗ ರವರ ಮಾಹಿತಿಗಾಗಿ.
7. ಹಿಆಸ/ಪ್ರಕ/ಕಡತ.